MVC.112/2024 RW-1

**ದಿನಾಂಕಃ 17.07.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ.ಎಸ್.ವಿ.ಎಂ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆ ಎಂದು ಒಪ್ಪಿ- ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಎಸ್.ಎಂ. ವಕೀಲರಿಂದಃ**

ಅಪಘಾತ ನಡೆದ ದಿನ ಕೆಎ.36.ಎಫ್.1401 ರ ಚಾಲಕ ನಾನೇ ಆಗಿರುತ್ತೇನೆ. ಅಪಘಾತವು ಎನ್.48 ರ ಮೂರು ಪಥದ ರಸ್ತೆಯಲ್ಲಿ ರಾತ್ರಿ 11.30 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ನಾನು ಕೆ.ಎಸ್.ಆರ್.ಟಿ.ಸಿ. ಬಸ್ ನ್ನು 3 ಪಥ ದ ಎಡಭಾಗದಲ್ಲಿ ಹೋಗುತ್ತಿರುತ್ತೇನೆ. ಅಪಘಾತದ ದಿನ ಹಿರಿಯೂರಿನ ಕಡೆಗೆ ಲಾರಿ ಹೋಗುತ್ತಿರುತ್ತದೆ. ಅಪಘಾತಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ ಮತ್ತು ಲಾರಿ ಚಾಲಕನ ನಿರ್ಲಕ್ಷ್ಯವೇ ಕಾರಣ ಎಂದು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅಪಘಾತಕ್ಕೆ ನನ್ನ ನಿರ್ಲಕ್ಷ್ಯ ಇರುವುದಿಲ್ಲ ಎಂದರು ನುಡಿಯುತ್ತಾರೆ. ನನ್ನ ವಿರುದ್ದ ಕ್ರಿಮಿನಲ್ ಪ್ರಕರಣ ಇದ್ದು ಹಾಲಿ ಮುಕ್ತಾವಾಗಿರುತ್ತದೆ. ನಮ್ಮ ಕೆ.ಎಸ್.ಆರ್.ಟಿ.ಸಿ. ಇಲಾಖೆಯಲ್ಲಿ ಇಲಾಖಾ ವಿಚಾರಣೆಯಾಗಿ ನನ್ನ ಪರವಾಗಿ ಆದೇಶವಾಗಿರುತ್ತದೆ. ಅಪಘಾತ ನನ್ನ ತಪ್ಪಿನಿಂದ ಆಗಿಲ್ಲ ಎಂದು ಪೊಲೀಸರಿಗೆ ಮತ್ತು ಮೇಲಾಧಿಕಾರಿಗಳಿಗೆ ದೂರು ಕೊಟ್ಟಿಲ್ಲ. ಘಟನೆ ನಡೆದ ದಿನ 42 ಜನ ಇರುತ್ತಾರೆ, ಅದರಲ್ಲಿ ಒಬ್ಬನಿಗೆ ಗಾಯವಾಗಿರುತ್ತದೆ. ನಾನು ಹೇಳಿದಂತೆ ಲಾರಿ ಚಾಲಕ ಬಂದು ಬಸ್ಸಿಗೆ ಅಪಘಾತ ಪಡಿಸಿರುತ್ತಾನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಕಚ್ಚಾ ನಕ್ಷೆ ಬಗ್ಗೆ ಗೊತ್ತಿಲ್ಲ. ನಾನು ಅರ್ಜಿದಾರರಿಗೆ ಕೆ.ಎಸ್.ಆರ್.ಟಿ.ಸಿ. ಕಡೆಯಿಂದ ಪರಿಹಾರ ಕೊಡಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಅಪರ ಎಂ.ಎ.ಸಿ.ಟಿ.
ಶಿರಾ.